**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರದ ಸಚಿವಾಲಯ,
ಸಾಮಾನ್ಯ ಆಡಳಿತ ಇಲಾಖೆ (ರಾಜಕೀಯ),
ವಿಧಾನ ಸೌಧ,
ಬೆಂಗಳೂರು, ದಿನಾಂಕ 15ನೇ ಮೇ 1976.

ಕ್ರಮಾಂಕ ಜಿಎಡಿ 28 ಪಿಎಲ್ 76

ಸುತ್ತೋಲೆ

ವಿಷಯ :- ಆಡಳಿತ ವ್ಯವಹಾರಗಳಲ್ಲಿ ಕನ್ನಡದ ಬಳಕೆ.

ಜಿಲ್ಲಾ ಮತ್ತು ಅದಕ್ಕಿಂತ ಕೆಳಗಿನ ಮಟ್ಟದ ಎಲ್ಲಾ ಕಛೇರಿಗಳ ವ್ಯವಹಾರಗಳಲ್ಲಿ ಕನ್ನಡವನ್ನು ಬಳಸಬೇಕೆಂಬುದು ಸರ್ಕಾರದ ನೀತಿಯಾಗಿದ್ದು ಆ ಬಗ್ಗೆ ಆದೇಶಗಳು ಹೊರಟಿರುವುದು ಈಗಾಗಲೇ ನಿಮಗೆ ತಿಳಿದಿರಬಹುದು. ನಮ್ಮ ಸರ್ಕಾರದಿಂದ ರಚಿಸಿರುವ ಅನೇಕ ಕಾರ್ಪೊರೇಷನ್ನುಗಳ, ಮಂಡಲಿಗಳ ಕಾರ್ಯವ್ಯಾಪ್ತಿ ಬಹಳ ವ್ಯಾಪಕವಾಗಿದ್ದು ತಾಲ್ಲೂಕು ಮತ್ತು ಅದಕ್ಕಿಂತ ಕೆಳಗಿನ ಮಟ್ಟಗಳಲ್ಲಿ ಸಾರ್ವಜನಿಕರಿಗೆ ಸಂಬಂಧಿವಿರುವ ಅನೇಕ ವಿಷಯಗಳಲ್ಲಿ ವ್ಯಾಪಿಸಿದೆ. ಆದಕಾರಣ ಜನರ ಅನುಕೂಲ ದೃಷ್ಟಿಯಿಂದ ಕಾರ್ಪೊರೇಷನ್ನು/ ಮಂಡಲಿಗಳು ತಮ್ಮ ಪತ್ರ ವ್ಯವಹಾರಗಳನ್ನೆಲ್ಲ ಕನ್ನಡದಲ್ಲಿ ನಡೆಸಬೇಕಾದ್ದು ಸೂಕ್ತವೆಂದು ಕಾಣುತ್ತದೆ. ಪ್ರಾರಂಭದಲ್ಲಿ ಸಣ್ಣಪುಟ್ಟ ಆದೇಶಗಳು, ಆಜ್ಞೆಗಳು, ಬಿಲ್ಲುಗಳು ಮತ್ತು ಫಾರ್ಮುಗಳನ್ನು ಕನ್ನಡದಲ್ಲಿ ಜಾರಿ ಮಾಡಬಹುದೆಂದು ತೋರುತ್ತದೆ. ಈ ದಿಶೆಯಲ್ಲಿ ಕಾರ್ಪೊರೇಷನ್ನುಗಳು ಮತ್ತು ಮಂಡಲಿಗಳು ಹೆಚ್ಚು ಸ್ವಾತಂತ್ರ್ಯದಿಂದ ಮುಂದುವರಿಯಬಹುದಾಗಿದೆ. ಆದಕಾರಣ ಈ ಮೂಲಕ ತಮಗೆ ಸೂಚಿಸುವುದೇನೆಂದರೆ ತಮ್ಮ ಕಾರ್ಪೊರೇಷನ್ನು/ ಮಂಡಲಿಯ, ತಮ್ಮ ಎಲ್ಲಾ ಅಧಿಕಾರಿಗಳಿಗೂ ಕನ್ನಡದಲ್ಲಿ ಪತ್ರ ವ್ಯವಹಾರ ನಡೆಸುವಂತೆ ಸೂಕ್ತ ಆದೇಶಗಳನ್ನು ಕಳುಹಿಸಬೇಕೆಂದು ಕೋರುತ್ತೇನೆ. ಇದಕ್ಕೆ ಬೇಕಾಗುವ ಬೆರಳಚ್ಚು ಯಂತ್ರದಲ್ಲಿ ತರಬೇತಿ ಪಡೆದವರು ಎಲ್ಲಾ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ರಿಜಿಸ್ಟರು ಮಾಡಿಸಿ ಕೆಲಸಕ್ಕೆ ಹಾಜರಾಗಲು ತಯಾರಾಗಿದ್ದಾರೆ. ಈ

ವಿಷಯವಾಗಿ ಮತ್ತೇನಾದರೂ ಮಾರ್ಗದರ್ಶನ ಅಥವಾ ಸಲಹೆ ಬೇಕಾಗಿದ್ದರೆ ಭಾಷೆ ಮತ್ತು ಕನ್ನಡ ಅಭಿವೃದ್ಧಿ ನಿರ್ದೇಶಕರು ಸಲಹೆ ಕೊಡಲು ಉತ್ಸುಕರಾಗಿದ್ದಾರೆ. ಆದಕಾರಣ ತಾವು ಕೂಡಲೇ ಈ ವಿಷಯದಲ್ಲಿ ಸೂಕ್ತ ಆದೇಶಗಳನ್ನು ಜಾರಿ ಮಾಡಬೇಕೆಂದು ಮತ್ತೊಮ್ಮೆ ಪ್ರಾರ್ಥಿಸುತ್ತೇನೆ.

ಸಹಿ/-

**(ಜಿ.ವಿ.ಕೆ. ರಾವ್),**

ಸರ್ಕಾರದ ಮುಖ್ಯ ಕಾರ್ಯದರ್ಶಿ